KAKL200000042019

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಂಗಾರಪೇಟೆ.</u>

<u>ದಿನಾಂಕ **22 ನೇ** ನವೆಂಬರ್ **- 2023**</u>

**- ಉಪಸ್ಥಿತರು -**

**ಶ್ರೀ. ಬಿ.ಕೇಶವಮೂರ್ತಿ,** ಬಿ.ಎ., ಎಲ್ಎಲ್.ಬಿ.,
ಪ್ರಧಾನ ಸಿವಿಲ್ **ನ್ಯಾಯಾಧೀಶರು ಮತ್ತು** ಜೆ.ಎಂ.ಎಫ್.ಸಿ. ಬಂಗಾರಪೇಟೆ.

**<u>ಅಸಲು ದಾವೆ ಸಂಖ್ಯೆ: 3/2019</u>**

<u>ಮಧ್ಯಂತರ ಅರ್ಜಿ **- 4**</u>

| | |
|---|---|
| ಅರ್ಜಿದಾರರು/ಃ ವಾದಿ | ಪಟೇಲ್.ಪಿ.ಆರ್. ವೆಂಕಟರಮಾರೆಡ್ಡಿ<br>**@** ಪಿ.ಆರ್. ವೆಂಕಟರಾಮರೆಡ್ಡಿ,<br>ಬಿನ್ ರಾಮಾರೆಡ್ಡಿ,<br>ಸುಮಾರು 85 ವರ್ಷ,<br>ವಾಸಃ ಪರವನಹಳ್ಳಿ ಗ್ರಾಮ,<br>ಕಸಬಾ ಹೋಬಳಿ, ಬಂಗಾರಪೇಟೆ ತಾಲ್ಲೂಕು.<br><br>(ವಾದಿ ಪರವಾಗಿ ಶ್ರೀ.ಕೆ.ಎಂ.ವಿ., ವಕೀಲರು) |

**- ವಿರುದ್ಧ -**

| | | |
|---|---|---|
| ಎದುರುದಾರರು/ಃ ಪ್ರತಿವಾದಿಗಳು | **1.** | ಕೋದಂಡರಾಮರೆಡ್ಡಿ ಮತ್ತು ಇತರರು.<br>ಬಿನ್ ಪಟೇಲ್.ಪಿ.ಆರ್. ವೆಂಕಟರಾಮಾರೆಡ್ಡಿ<br>**@** ಪಿ.ಆರ್. ವೆಂಕಟರಾಮಾರೆಡ್ಡಿ,<br>ಸುಮಾರು 59 ವರ್ಷ,<br>ವಾಸಃ ಪರವನಹಳ್ಳಿ ಗ್ರಾಮ,<br>ಕಸಬಾ ಹೋಬಳಿ, ಬಂಗಾರಪೇಟೆ ತಾಲ್ಲೂಕು.<br><br>(ಪ್ರತಿವಾದಿ 1, 2, 4 ಮತ್ತು 5 ರವರ ಪರವಾಗಿ ಶ್ರೀ.ಎ.ಎಂ.ಆರ್., ವಕೀಲರು,<br>ಪ್ರತಿವಾದಿ 3 ರವರು ಏಕಪಕ್ಷೀಯರಾಗಿರುತ್ತಾರೆ) |

| | | |
|---|---|---|
| i. | Provision under which the applications are filed | U/o 39 Rule 1 & 2 r/w Sec. 151 of CPC |
| ii. | Relief sought for | Temporary Injunction |
| iii. | The date on which the application is filed | 25.05.2022 |
| iv. | Number of the application | I.A. No.IV |
| v. | The date on which the objection is filed by different opponents | - |
| vi. | The date on which the orders were passed on the said application | 22.11.2023. |

**ಮದ್ಯಂತರ ಅರ್ಜಿ 4 ರ ಮೇಲೆ ಆದೇಶ ಃ**

ವಾದಿ ಮಧ್ಯಂತರ ಅರ್ಜಿ **4** ನ್ನು ಸಿ.ಪ್ರ.ಸಂ. ಕ್ರಮಾದೇಶ **39** ನಿಯಮ **1** ಮತ್ತು **2** ರಂತೆ ಸಲ್ಲಿಸಿ ದಾವಾ ಸ್ವತ್ತುಗಳ ಸಂಬಂಧ ಪ್ರತಿವಾದಿಗಳು ಅಡಚಣೆ ಮತ್ತು ತೊಂದರೆ ನೀಡದಂತೆ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶದ ಮೂಲಕ ನಿರ್ಭಂದಿಸಬೇಕೆಂದು ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

**2.** ವಾದಿ ತಮ್ಮ ವಾದಪತ್ರ ಮತ್ತು ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತುಗಳನ್ನು ತಾನು ವೈಯಕ್ತಿಕವಾಗಿ ಸ್ವಂತ ಆದಾಯದಿಂದ ದಿನಾಂಕಃ **09.07.1997** ಮತ್ತು ದಿನಾಂಕಃ **03.07.2020** ರ ಕ್ರಯ ಪತ್ರಗಳ ಮುಖಾಂತರ ಖರೀದಿಸಿರುವುದಾಗಿ ಸದರಿ ಸ್ವತ್ತಿನಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲವೆಂದು ಪ್ರತಿಪಾದಿಸುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ತಂದೆ ಮತ್ತು ಮಕ್ಕಳಾಗಿದ್ದು ಕುಟುಂಬದ ಸ್ವತ್ತುಗಳನ್ನು ಈಗಾಗಲೇ ವಿಭಾಗ ಮಾಡಿಕೊಂಡಿರುವುದಾಗಿ, ದಾವಾ ಸ್ವತ್ತುಗಳು ವಾದಿಯ ಸ್ವಂತ ಸ್ವತ್ತು ಆಗಿರುವುದರಿಂದ ವಿಭಾಗದಲ್ಲಿ ದಾವಾ ಸ್ವತ್ತನ್ನು ಸೇರ್ಪಡೆ ಮಾಡಿರುವುದಿಲ್ಲವೆಂದು ಪ್ರತಿಪಾದಿಸುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿ ನಾಗದೇವತೆ, ಗಣೇಶ, ನವಗ್ರಹ ಮತ್ತು ಕಾಶಿ ವಿಶ್ವನಾಥ ದೇವಾಲಯಗಳನ್ನು ಸ್ಥಾಪನೆ ಮಾಡಿರುವುದಾಗಿ, ಸದರಿ ದೇವಾಲಯದ ಆದಾಯದಿಂದ ದೇವಸ್ಥಾನದ ಕಾರ್ಯ ಕ್ರಮಗಳನ್ನು ಮಾಡುವುದರ

ಜೊತೆಗೆ ವಾದಿ ಜೀವನ ನಿರ್ವಹಣೆ ಮಾಡುತ್ತಿರುವುದಾಗಿ ಪ್ರತಿಪಾದಿಸುತ್ತಾರೆ. ಪ್ರತಿವಾದಿಗಳು ವಾದಿಯ ಮಕ್ಕಳಾಗಿದ್ದರು ಅವರಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ರೀತಿ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲವೆಂದು, ಆದರೂ ಪ್ರತಿವಾದಿಗಳು ವಾದಿಯು ದಾವಾ ಸ್ವತ್ತನ್ನು ಅನುಭೋಗ ಮಾಡಲು ನಿರಂತರ ತೊಂದರೆ ಕೊಡುತ್ತಿರುವುದರಿಂದ ಈ ದಾವೆ ತಂದಿರುವುದಾಗಿ ಪ್ರತಿಪಾದಿಸುತ್ತಾರೆ. ವಾದಿಯು ದಾವಾ ಸ್ವತ್ತುಗಳ ಸಂಬಂಧ ಪ್ರತಿವಾದಿಗಳಿಗೆ ಮೃತ್ಯು ಪತ್ರ ಬರೆದುಕೊಟ್ಟಿದ್ದು ಆ ನಂತರ ಅದನ್ನು ರದ್ದು ಗೊಳಿಸಿರುವುದಾಗಿ ತದನಂತರ ಪ್ರತಿವಾದಿಗಳು ದಾವಾ ಸ್ವತ್ತಿನ ವಾದಿ ಅನುಭೋಗಕ್ಕೆ ತೊಂದರೆ ಕೊಡುತ್ತಿರುವುದಾಗಿ, ನ್ಯಾಯಾಲಯದ ಆದೇಶವಿಲ್ಲದೇ ಪ್ರತಿವಾದಿಗಳನ್ನು ನಿರ್ಬಂಧಿಸಲು ಕಷ್ಟವಾಗಿರುವುದರಿಂದ ವಾದಿ ಈ ಅರ್ಜಿ ಸಲ್ಲಿಸಿರುವುದಾಗಿ ನ್ಯಾಯಾಲಯ ತಾತ್ಕಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸದಿದ್ದಲ್ಲಿ ಪ್ರತಿವಾದಿಗಳು ತೊಂದರೆ ಕೊಡುವ ಸಾಧ್ಯತೆ ಇರುವ ಕಾರಣ ಈ ಮಧ್ಯಂತರ ಅರ್ಜಿ 4 ರ ಮೇಲೆ ಆದೇಶ ತುರ್ತು ಮತ್ತು ಅವಶ್ಯಕ ಎಂದು ಪ್ರತಿಪಾದಿಸುತ್ತಾರೆ.

**3.** ಮಧ್ಯಂತರ ಅರ್ಜಿ.4 ಕ್ಕೆ ಪ್ರತಿವಾದಿಗಳು ತಕರಾರು ಸಲ್ಲಿಸಿರುವುದಿಲ್ಲ ಬದಲಾಗಿ ಪ್ರತಿವಾದ ಪತ್ರವನ್ನು ತಕರಾರು ಎಂದು ಪರಿಗಣಿಸಲು ಕೋರಿರುತ್ತಾರೆ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತುಗಳು ವಾದಿಯ ಸ್ವಯಾರ್ಜಿತ ಸ್ವತ್ತು ಆಗಿರುವುದಿಲ್ಲವೆಂದು, ಸದರಿ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಸ್ವತ್ತು ಎಂದು, ದಾವಾ ಸ್ವತ್ತುಗಳ ಸಂಬಂಧಅಸಲು ದಾವಾ ಸಂಖ್ಯೆ- **7/2011** ರಂತೆ ದಾವೆ ನಡೆಯುತ್ತಿದ್ದ ಕಾರಣ ದಾವಾ ಸ್ವತ್ತುಗಳನ್ನು ಕುಟುಂಬದಲ್ಲಿ ನಡೆದ ವಿಭಾಗದ ಸಂದರ್ಭದಲ್ಲಿ ಸೇರ್ಪಡೆ ಮಾಡಿರುವುದಿಲ್ಲವೆಂದು ಪ್ರತಿಪಾದಿಸುತ್ತಾರೆ. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟಬದ ಸ್ವತ್ತುಗಳಾಗಿದ್ದು ಅದರಲ್ಲಿ ಪ್ರತಿವಾದಿಗಳಿಗೆ ಭಾಗಾಂಶದ ಹಕ್ಕು ಇರುವುದಾಗಿ ಪ್ರತಿಪಾದಿಸುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತುಗಳ ಸಹಾ ಮಾಲೀಕರಾಗಿರುವುದರಿಂದ ವಾದಿಯ ಈ ದಾವೆ ಊರ್ಜಿತವಾಗಿರುವುದಿಲ್ಲವೆಂದು ಮತ್ತು ವಾದಿಯ ಮಧ್ಯಂತರ ಅರ್ಜಿ 1

ಸಹಾ ಊರ್ಜಿತವಾಗಿರುವುದಿಲ್ಲವೆಂದು ಆ ಕಾರಣ ಅರ್ಜಿಯನ್ನು ವಜಾಗೊಳಿಸಬೇಕೆಂದು ವಾದಿಸಿರುತ್ತಾರೆ.

**4.** ಉಭಯಪಕ್ಷಕಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆಃ

**ಃ ಅಂಶಗಳು ಃ**

**1** ವಾದಿ/ ಅರ್ಜಿದಾರರು ಮಧ್ಯಂತರ ಅರ್ಜಿ 4 ರ ಸಂಬಂದ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸಲು ಅವಶ್ಯಕವಾಗಿರುವ ಮೇಲ್ನೋಟಕ್ಕೆ ಕಾಣುವಂತೆ ಈ ಪ್ರಕರಣ ಇದೇ ಎಂದು ತೋರ್ಪಡಿಸುವರೇ **?**

**2** ವಾದಿ/ ಅರ್ಜಿದಾರರು ಮಧ್ಯಂತರ ಅರ್ಜಿ 4 ರ ಸಂಭಂದ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸಲು ಅವಶ್ಯಕವಾಗಿರುವ ಅನುಕೂಲತೆಯ ತುಲನೆ ತಮ್ಮ ಪರವಾಗಿದೆ ಎಂದು ತೋರ್ಪಡಿಸುವರೇ**?**

**3** ವಾದಿ/ ಅರ್ಜಿದಾರರು ಮಧ್ಯಂತರ ಅರ್ಜಿ 4 ರ ಸಂಭಂದ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸದಿದ್ದಲ್ಲಿ ತಮ್ಮ ಪರವಾಗಿ ಸರಿಪಡಿಸಲಾಗದ ನಷ್ಟ ಉಂಟಾಗುತ್ತದೆಂದು ತೋರ್ಪಡಿಸುವರೇ **?**

**4** ಯಾವ ಆದೇಶ ಅಥವಾ ಪರಿಹಾರ **?**

**6.** ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ-**1** | ಃ | ಸಕಾರಾತ್ಮಕವಾಗಿ. |
| ಅಂಶ-**2** | ಃ | ಸಕಾರಾತ್ಮಕವಾಗಿ. |
| ಅಂಶ-**3** | ಃ | ಸಕಾರಾತ್ಮಕವಾಗಿ. |
| ಅಂಶ-4 | ಃ | ಅಂತಿಮ ಆದೇಶದಂತೆ |

**:: ಕಾರಣಗಳು ::**

7. **ಅಂಶ-1 ರಿಂದ 3:-** ವಾದಿಯು ಈ ದಾವೆಯನ್ನು ದಾವಾ ಸ್ವತ್ತುಗಳ ಸಂಬಂಧ ಮಾಲೀಕತ್ವದ ಘೋಷಣೆ ಮಾಡುವಂತೆ ಮತ್ತು ಶಾಶ್ವತ ನಿರ್ಬಂದಕಾಜ್ಞೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ದಾವಾ ಪತ್ರಗಳನ್ನು ಪರಿಶೀಲಿಸಿದಾಗ ವಾದಿ ಮತ್ತು ಪ್ರತಿವಾದಿಗಳು ತಂದೆ ಮಕ್ಕಳು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ದಾವಾ ಸ್ವತ್ತುಗಳ ಸಂಬಂಧ ವಾದಿಯ ಹೆಸರಿನಲ್ಲಿ ಕ್ರಯ ಪತ್ರಗಳಾಗಿರುವುದೂ ಸಹಾ ಒಪ್ಪಿತ ಸಂಗತಿಯಾಗಿರುತ್ತದೆ . ದಾವಾ ಸ್ವತ್ತುಗಳನ್ನು ಒಟ್ಟು ಕುಟುಂಬದ ಪರವಾಗಿ ಖರೀದಿಸಲಾಗಿರುತ್ತದೆಯೇ ಅಥವಾ ಸದರಿ ಸ್ವತ್ತುಗಳು ವಾದಿಯ ಸ್ವಯಾರ್ಜಿತ ಸ್ವತ್ತುವಾಗಿರುತ್ತದೆಯೇ ಎಂಬುದು ವಿವಾದಿತ ಅಂಶವಾಗಿರುತ್ತದೆ. ದಾವಾ ಸ್ವತ್ತುಗಳನ್ನು ಒಟ್ಟು ಕುಟುಂಬದ ಪರವಾಗಿ ಖರೀದಿಸಲಾಗಿರುತ್ತದೆ ಎಂದು ಈ ಹಂತದಲ್ಲಿ ನಿರ್ಣಯಿಸಲು ಸಾಧ್ಯವಿರುವುದಿಲ್ಲ. ಉಭಯ ಪಕ್ಷಕಾರರ ವಿಚಾರಣೆ ನಂತರ ನಿರ್ಣಯ ನೀಡುವಾಗ ಈ ಸಂಬಂಧ ಚರ್ಚಿಸಿ ನಿರ್ಣಯಿಸಲು ಸಾಧ್ಯವಾಗುತ್ತದೆ. ಈ ಹಂತದಲ್ಲಿ ಈಗಾಗಲೇ ಗುರುತಿಸಿರುವ ನಿಪಿ-1 ಮತ್ತು 2 ಕ್ರಯ ಪತ್ರಗಳನ್ನು ಗುರುತಿಸಿದಾಗ ವಾದಿ ದಾವಾ ಸ್ವತ್ತುಗಳನ್ನು ಖರೀದಿಸಿರುವುದು ಕಂಡುಬರುತ್ತದೆ. ಸದರಿ ಕ್ರಯ ಪತ್ರಗಳಲ್ಲಿ ಒಟ್ಟು ಕುಟುಂಬದ ಪರವಾಗಿ ಖರೀದಿಸಲಾಗಿದೆ ಎಂದು ಯಾವುದೇ ಉಲ್ಲೇಖ ಇರುವುದಿಲ್ಲ. ಮುಂದುವರೆದು, ನಿಪಿ-10 ವಿಭಾಗ ಪತ್ರವನ್ನು ಪರಿಶೀಲಿಸಿದಾಗ ವಾದಿ ಮತ್ತು ಪ್ರತಿವಾದಿ ಒಟ್ಟು ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಾಗ ದಾವಾ ಸ್ವತ್ತುಗಳನ್ನು ಸೇರ್ಪಡೆ ಮಾಡಿರುವುದಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಅಂಶಗಳು ದಾವಾ ಸ್ವತ್ತುಗಳು ವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂಬುದನ್ನು ಮೇಲ್ನೋಟಕ್ಕೆ ತೋರ್ಪಡಿಸುತ್ತದೆ. ಮುಂದುವರೆದು, ಅಸಲು ದಾವಾ ಸಂಖ್ಯೆ-7/2011 ರ ತೀರ್ಪು ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಪ್ರಕರಣದ ವಾದಿ ಸದರಿ ಪ್ರಕರಣದಲ್ಲಿ ಭಾಗವಹಿಸಿ ಸ್ಪರ್ಧಿಸಿ ತಮ್ಮ ಪರವಾಗಿ ಆದೇಶವಾಗುವಂತೆ ನೋಡಿಕೊಂಡಿರುವುದು ಕಂಡುಬರುತ್ತದೆ. ಈ ಎಲ್ಲಾ ಅಂಶಗಳು ದಾವಾ ಸ್ವತ್ತುಗಳು ವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂಬುದನ್ನು ಮೇಲ್ನೋಟಕ್ಕೆ ತೋರ್ಪಡಿಸುತ್ತವೆ. ದಾವಾ ಸ್ವತ್ತುಗಳ ಸಂಬಂಧ ವಾದಿ

ನಿಪಿ-8 ರಂತೆ ಮೃತ್ಯು ಪತ್ರವನ್ನು ಪ್ರತಿವಾದಿಗಳ ಪರ ಬರೆದುಕೊಟ್ಟು ಆ ನಂತರ ಸದರಿ ಮೃತ್ಯು ಪತ್ರವನ್ನು ನಿಪಿ-9 ರ ವಿಲ್ ರದ್ದಾಯ್ತಿ ಪತ್ರದ ಮುಖಾಂತರ ರದ್ದುಗೊಳಿಸಿರುತ್ತಾರೆ. ಈ ಅಂಶವು ಸಹಾ ದಾವಾ ಸ್ವತ್ತುಗಳು ವಾದಿಯ ಸಂಪೂರ್ಣ ಮಾಲೀಕತ್ವ ಮತ್ತು ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಮೇಲ್ನೋಟಕ್ಕೆ ತೋರ್ಪಡಿಸುತ್ತದೆ. ವಾದಿ ಮತ್ತು ಪ್ರತಿವಾದಿಯರ ಪ್ರಕರಣವನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಕಾಣುವಂತೆ ವಾದಿಯ ಪರ ಪ್ರಕರಣ ಇರುತ್ತದೆ. ವಾದಿ ಮತ್ತು ಪ್ರತಿವಾದಿಯರ ಪೈಕಿ ಸರಿಪಡಿಸಲಾಗದ ಹಾನಿ ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ವಾದಿಯ ಪರವಾಗಿ ಹೊರಡಿಸದಿದ್ದಲ್ಲಿ ಉಂಟಾಗುತ್ತದೆ. ಆದ್ದರಿಂದ ಈ ದಾವೆಯು ನಿರ್ಣಯವಾಗುವವರೆಗೂ ವಾದಿಯ ಪರವಾಗಿ ಮತ್ತು ಪ್ರತಿವಾದಿಗಳ ವಿರುದ್ಧವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆ ಹೊರಡಿಸುವುದು ಸೂಕ್ತ ಎಂದು ನ್ಯಾಯಾಲಯ ನಿರ್ಣಯಿಸಿದೆ. ಅದರಂತೆ ಅಂಶ 1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**8.** **<u>ಅಂಶ.4ಃ-</u>** ಮೇಲ್ಕಂಡ ಕಾರಣಗಳಿಂದ ಈ ಕೆಳಕಂಡಂತೆ ಆದೇಶಿಸುತ್ತೇನೆ.

**<u>ಃ ಆದೇಶ ಃ</u>**

ವಾದಿ ಸಿ.ಪ್ರ.ಸಂ. ಕ್ರಮಾದೇಶ **39** ನಿಯಮ **1** ಮತ್ತು **2** ರ ಅನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ.**4** ನ್ನು ಅಂಗೀಕರಿಸಲಾಗಿದೆ.

ಪ್ರತಿವಾದಿಗಳು ಮತ್ತು ಅವರ ಪ್ರತಿನಿಧಿಗಳು ಈ ದಾವೆಯು ಇತ್ಯರ್ಥ ಆಗುವವರೆಗೂ ವಾದಿಗೆ ದಾವಾ ಸ್ವತ್ತುಗಳ ಅನುಭೋಗ ಮಾಡಲು ಯಾವುದೇ ರೀತಿ ಅಡಚಣೆ ಮತ್ತು ತೊಂದರೆ ಉಂಟು ಮಾಡದಂತೆ

ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶದ ಮೂಲಕ ನಿರ್ಬಂಧಿಸಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು, ನಂತರದಲ್ಲಿ ಆದೇಶವನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ **ದಿನಾಂಕಃ 22 ನೇ** ನವೆಂಬರ್ *- 2023* ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ)

ಸಹಿ/-
**(ಬಿ.ಕೇಶವಮೂರ್ತಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ.